೫	ಆರಕ್ಷಕ ಅಧೀಕ್ಷಕರು (ನಾನ್‌ಐಪಿಎಸ್) (ಒಂದು ಹುದ್ದೆ ಖಾಲಿ ಇದೆ)	೨೫
೬	ಆರಕ್ಷಕ ಉಪ ಅಧೀಕ್ಷಕರು	೧೫೬
೭	ಆರಕ್ಷಕ ಉಪ ನಿರೀಕ್ಷಕರು	೧೫೭೦
೮	ಆರಕ್ಷಕ ದಳ : (ಸಿವಿಲ್)	
	ಅ) ಮುಖ್ಯ ಪೇದೆಗಳು	೫೦೬೪
	ಆ) ಆರಕ್ಷಕ ಪೇದೆಗಳು.	೨೦೨೮೭
		೨೫೩೫೦

ಆ) ಜನಸಂಖ್ಯೆ ಹೆಚ್ಚಾಗುವುದರ ಮೇಲೆ, ಅಪರಾಧ ಮತ್ತು ಕಾನೂನು ಸುವ್ಯವಸ್ಥೆ ಸಮಸ್ಯೆಗಳ ಹೆಚ್ಚಳ, ಕೈಗಾರಿಕೋದ್ಯಮಿಗಳ ಬೆಳವಣಿಗೆ, ಮತೀಯ ಮತ್ತು ರಾಜಕೀಯ ಚಟುವಟಿಕೆಗಳ, ಕಾರ್ಮಿಕ ವರ್ಗದ, ದಾವಿರ್ಥಿಗಳ ಮತ್ತು ಇತರ ವರ್ಗಗಳ ದಂಗೆ, ಗಲಭೆಗಳ ಹೆಚ್ಚಳ, ಹೆಚ್ಚುತ್ತಿರುವ ಸಂಚಾರ ಸಮಸ್ಯೆಗಳು ಮತ್ತು ಸಮಾಜ ವಿರೋಧಿ ಶಕ್ತಿಗಳನ್ನು ತಡೆಗಟ್ಟಲು ಕಾಲಕಾಲಕ್ಕೆ ರಾಜ್ಯದಲ್ಲಿರುವ ಪೋಲೀಸರ ಸಂಖ್ಯೆಯನ್ನು ನಿಗದಿಪಡಿಸಲಾಗುತ್ತದೆ.

ANNOUNCEMENT

Reg.—Message from the Chairman Legislative Council

Mr. Speaker.—I have received the following message from the Chairman, Legislative Council.

"As required by rule 114 of the Rules of Procedure and Conduct of Business in the Karnataka Legislative Council, I send herwith the following Bills which have been agreed to by the Legislative Council on 9-8-1985 without recommendations.

Name of the Bills.

1. The Karnataka Tax on Professions, Trades, Calling and Employments (Ammmendment) Bill, 1985.
2. The Karntaka Entertainment Tax (Ammmendment) Bill, 1985.
3. The Karnataka Tax on Luxuries' Hotels and Lodging Houses) (Amendment) Bill, 1985.
4. The Karnataka Agricultural Income Tax (Amendment) Bill, 1985.
5. The Karnataka Tax on Entry of Goods into local areas for Consumption, Use or Sale Therein (Amendment) Bill, 1985.
6. The Karnataka Sales Tax (Amendment) Bill, 1985.

7. The karnataka Motor Vehicles Texation (Amendment) Bill, 1985".

further I have received the following message from the Chairman, Legislative Council.

"As required by rule 114 of the Rules of Procedure and Conduct of Bussiness in the Karnataka Legislative Council, I send herewith the following Bills which have been agreed to by the Legislative Coucial on 9th August, 1985 without amendments.

Name of the Bills

1 The Karnataka Civil Courts Laws (Amendment) Bill, 1985.

2. The Karnataka Legal Aid Board (Amendment) Bill. 1985,

3. The Karnataka Legislature Salaries, Pensions and Allowances (Second Amendment) Bill, 1985".

ಸಭೆಯ ಮುಂದಿಡಲಾದ ಕಾಗದ ಪತ್ರಗಳು

೧) ಶ್ರೀ ಆರ್. ಎಲ್. ಜಾಲಪ್ಪ(ಸಹಕಾರ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ೧೩೨ನೇ ಕಲಮಿನ ಮೇರೆಗೆ-೧೯೮೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ನಿಯಮಾವಳಿಗಳಿಗೆ ಸಂಬಂಧಿಸಿದಂತೆ ೧೯೮೫ನೇ ಆಗಸ್ಟ್, ೬ನೇ ದಿನಾಂಕದಂದು, ಹೊರಡಿಸಲಾದ ಸಿ.ಎಮ್.ಡಬ್ಲ್ಯೂ. ೬೮ ಸಿ.ಎಲ್.ಎಂ. ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

೨) ಶ್ರೀ ಜೆ. ಎಚ್. ಪಟೇಲ್(ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ-೧೯೮೫-೮೪ನೇ ಸಾಲಿನ ಮೈಸೂರು ಕಾಸ್ಮೆಟಿಕ್ಸ್ ನಿಯಮಿತದ ಕಾರ್ಯನಿರ್ವಹಣೆಗಳ ಮೇಲಿನ ಸಂಕ್ಷಿಪ್ತ ಟಿಪ್ಪಣಿಯೊಂದಿಗೆ ೧೮ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

೩) ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೫(೨)ನೇ ಕಲಮಿನ ಮೇರೆಗೆ—

೧೯೮೫-೮೬ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಎಲ್ಲಾ ಕಾಗದಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

Privilege Notice by Sri S. Bangarapppa regarding Contradictory Statement by the Chief Minister and Public Works Minister.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಮಾತನಾಡುತ್ತೀರೊ ? ಪ್ರಿವಿಲೇಜ್ ಮೋಷನ್ ಮೇಲೆ ಮಾತನಾಡುತ್ತೀರೋ? ಯಾವುದು ವಿಷಯ ಹೇಳಿ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಯಾವ ಒಂದು ಅಡ್ಜರ್ನ್‌ಮೆಂಟ ಮೋಷನ್‌ನ್ನು ಕಳಿಸಿಲ್ಲ. ಕೌಟ್ಪ್ರತಕ್ಕಂಥದ್ದು ಹಕ್ಕು ಚ್ಯುತಿ ನಿರ್ಣಯ ಅಥವಾ ಹಕ್ಕುಭಾಧ್ಯತಾ ನಿರ್ಣಯ. ನಿಯಮ ೧೯೦ರ ಪ್ರಕಾರ ನಾನು, ಮೊಯಿಲಿಯವರು ಮತ್ತು ಬೇರೆ ಮಾನ್ಯ ಸದಸ್ಯರು ನಾವು ಎಲ್ಲ ಸೇರಿಕೊಟ್ಟಿದ್ದೇವೆ. ವಿಷಯ ತಲುಗುಗಂಗಾ ನೀರಿನ ವಿಚಾರದಲ್ಲಿ. ಕರ್ನಾಟಕ ಮತ್ತು